**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಪೊನ್ನಂಪೇಟೆ, ಕೊಡಗು ಜಿಲ್ಲೆ.</u>**

**<u>ಕ್ರಿಮಿನಲ್ ಮೊ.ಸಂ. 73/2016.</u>**

ಪ್ರಾ. ಸಾ. :-4

ಚಾ. ಸಾ. :-9

ಹೆಸರು :- ಪೊನ್ನಪ್ಪ
ತಂದೆಯ ಹೆಸರು :- ಚಂಗಪ್ಪ
ವಯಸ್ಸು :- 76 ವರ್ಷ
ಉದ್ಯೋಗ :- ವ್ಯವಸಾಯ
ವಾಸಸ್ಥಳ :- ಬಾಡಗರಕೇರಿ

---

ಪ್ರಮಾಣೀಕರಿಸಲಾದ ದಿನಾಂಕ :-13-09-2023.

ಮುಖ್ಯ ವಿಚಾರಣೆ :- ಮಾನ್ಯ ಸ. ಸ. ಅ. ರವರಿಂದ :-

ಆರೋಪಿ 2 ನಮ್ಮ ಕುಟುಂಬದವರು. ಸಾಕ್ಷಿ ತಮ್ಮ ಸಹಿ ಇರುವ ದಾಖಲೆಗಳನ್ನು ಗುರುತಿಸಿದ್ದು ಸದರಿ ದಾಖಲೆಗಳು ಕೃತ್ಯ ಸ್ಥಳ ಪಂಚನಾಮೆ ಹಾಗೂ ಸ್ವತ್ತು ಅಮಾನತ್ತು ಮಹಜರ್ ಆಗಿದ್ದು ಅವುಗಳನ್ನು ನಿಪಿ 8 ಮತ್ತು 9 ಎಂದು, ಸಾಕ್ಷಿ ಸಹಿಗಳನ್ನು ನಿಪಿ 8ಎ ಮತ್ತು ನಿಪಿ 9ಎ ಎಂದು ಗುರುತಿಸಲಾಯಿತು. ಬಾಡಗರಕೇರಿ ಬಸ್ ನಿಲ್ದಾಣದಲ್ಲಿ ನಿಪಿ 8 ಮತ್ತು 9 ಕ್ಕೆ ಸಹಿ ಮಾಡಿದ್ದೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಏನನ್ನು ಅಮಾನತು ಪಡಿಸಿಕೊಂಡಿಲ್ಲ. ಪೋಲೀಸರ ಮುಂದೆ ನಾನು ಯಾವುದೆ ಹೇಳಿಕೆ ನೀಡಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ.

> (ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲು ಃ- ಮಾನ್ಯ ಸ ಸ ಅ ರವರಿಂದ</u> ಃ-

ದಿನಾಂಕಃ 21.09.2015 ರಂದು ಶ್ರೀಮಂಗಲ ಪೊಲೀಸ್ ಠಾಣೆಯವರು ಮಹಜರ್ ಗೆ ಹಾಜರಾಗಲು ಕೇಳಿಕೊಂಡಂತೆ ನಾನು ಒಪ್ಪಿಕೊಂಡು ನಾನು ಅವರೊಂದಿಗೆ ಬಾಡಗಕೇರಿ ಗ್ರಾಮದ ಚೋನೀರ ಮಧುರವರ ತೋಟಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಅಲ್ಲಿ ಆರೋಪಿ ಮಹಮದ್ ವಾಸಿಮ್ ಒಂದು ಪ್ಲಾಸ್ಟಿಕ್ ಸುತ್ತಿದ ಕಟ್ಟನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿ ಪ್ಲಾಸ್ಟಿಕ್

ಕಟ್ಟನ್ನು ಬಿಚ್ಚಿದಾಗ ಅದರಲ್ಲಿ ಒಂದು ಮರ ಕಡಿಯುವ ಯಂತ್ರ, ಕೊಡಲಿ ಹಾಗೂ ಹಾರೆ ಇತ್ತು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿದರು ಎಂದರೆ ಸರಿಯಲ್ಲ. ಮಹಜರ್ ಅನ್ನು ಮಧ್ಯಾಹ್ನ 12.30 ರಿಂದ 1.30 ರಲ್ಲಿ ಮಾಡಿದರು ಎಂದರೆ ಸರಿಯಲ್ಲ. ಆಗ ನಾನು ಸ್ಥಳದಲ್ಲಿ ನಿಪಿ 8 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ದಿ.22.09.2015 ರಂದು ಶ್ರೀಮಂಗಲ ಪೊಲೀಸರು ನನ್ನನ್ನು ಮಹಜರ್ ಗೆ ಹಾಜರಾಗಲು ಕೇಳಿಕೊಂಡಂತೆ ನಾನು ಒಪ್ಪಿಕೊಂಡು ನಾನು ಅವರೊಂದಿಗೆ ಬಾಡಗಕೇರಿ ಗ್ರಾಮದ ಮೃತ್ಯುಂಜಯ ದೇವಸ್ಥಾನಕ್ಕೆ ಹೋಗುವ ಕವಲು ರಸ್ತೆಯಲ್ಲಿ ಇದ್ದ ನನ್ನನ್ನು ಚೋನೀರ ಮಧುರವರ ತೋಟಕ್ಕೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅಲ್ಲಿ ಸರ್ವೆ ನಂ.20/2 ರ ಕಾಫಿ ತೋಟದಲ್ಲಿ ಒಣಗಿದ ತೊಟಗೆ ಹೋಗುವ ಬೀಟೆ ಮರದ ಗುತ್ತಿ ಇತ್ತು ಎಂದರೆ ಸರಿಯಲ್ಲ. ಅದನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿ ಬಿಳಿ ಬಣ್ಣದಿಂದ **SMLPS1** ಎಂದು ಸಂಖ್ಯೆ ನೀಡಿದರು ಎಂದರೆ ಸರಿಯಲ್ಲ. ಮಹಜರ್ ಅನ್ನು ಬೆಳಗ್ಗೆ 11.15 ರಿಂದ 12.30 ರಲ್ಲಿ ಮಾಡಿದರು ಎಂದರೆ ಸರಿಯಲ್ಲ. ಆಗ ನಾನು ಸ್ಥಳದಲ್ಲಿ ನಿಪಿ 9 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈಗ ಮೇಲೆ ವಿವರಿಸಿದಂತೆ ಪೋಲೀಸರಿಗೆ ತನಿಖೆ ಕಾಲದಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಪೊಲೀಸರ ಮುಂದೆ ನೀಡಿದ್ದ ಹೇಳಿಕೆಯನ್ನು ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ 10 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿತರ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚುಕರಿಸಿ ಅಚ್ಚುಪ್ರತಿಯನ್ನು ತೆಗೆಯಲಾಗಿರುತ್ತದೆ)

sd/-

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಪೊನ್ನಂಪೇಟೆ.

(ಸಾಕ್ಷಿಯ ಸಹಿ)